ಇ) 2002–03ನೇ ಸಾಲಿನಲ್ಲಿ ಸರ್ಕಾರ ನೀಡಿದ್ದ ಹಣವನ್ನು ಬಳಸದೇ ಇರುವವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ವಿವಿಧ ಯೋಜನೆಗಳಿಗೆ ಒದಗಿಸಿ ಬಿಡುಗಡೆಗೊಳಿಸಿದ ಹಣವನ್ನು ವಿಶೇಷ ಘಟಕ ಯೋಜನೆ, ಇ.ಬಿ.ಎಲ್. ಬಹುಮಾನದ ಹಣವನ್ನು ಸರ್ಕಾರದ ವಿವಿಧ ಸಂಸ್ಥೆಗಳಿಂದ ಖರ್ಚನ್ನು ಭರಿಸಬೇಕಾಗಿರುತ್ತದೆ. ಇದರಿಂದ ಕೆಲವು ಕಚೇರಿಗಳು ಒದಗಿಸಿದ ಹಣವನ್ನು ಪೂರ್ಣವಾಗಿ ಖರ್ಚು ಮಾಡಿರುವುದಿಲ್ಲ.

ಆ) ಮತ್ತು ಇ)

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು (ನಗರ) ಇವರ ಕರ್ತವ್ಯ ನಿರ್ವಹಣೆಯಲ್ಲಿನ ಲೋಪತನದಿಂದ ಹಾಗೂ ಕೊರತೆಯಿರುವ ಖರ್ಚು ಮತ್ತು ವೆಚ್ಚಗಳ ಸಂಬಂಧ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರ ಬೆಂಗಳೂರು (ನಗರ) ಕಚೇರಿಯ ತಪಾಸಣಾ ವರದಿಯನ್ನು ಪರಿಶೀಲಿಸಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು (ನಗರ) ಮತ್ತು ಕಚೇರಿ ಅಧೀಕ್ಷಕ ಇವರುಗಳನ್ನು ಇಲಾಖಾ ವಿಚಾರಣೆ ಬಾಕಿಯಿಟ್ಟು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಂದ ತಯಾರಿಂದ ಸರಕುಗಳ ರಫ್ತಿನ ಬಗ್ಗೆ

4183 (4598) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಯಾವಯಾವ ದೇಶಗಳಿಗೆ ರಫ್ತು ಆಗುತ್ತದೆ;

ಆ) ಎಷ್ಟು ಮೌಲ್ಯದ ಸರಕುಗಳು ಬೇರೆ ದೇಶಗಳಿಗೆ ರಫ್ತು ಆಗುತ್ತಿದೆ;

ಇ) ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ರಫ್ತು ಮಾಡುವಲ್ಲಿ ಸರಳೀಕರಣವಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಅಮೇರಿಕ, ಆಫ್ರಿಕ, ಐರೋಪ್ಯ ನೈರುತ್ಯ ಏಷ್ಯದ ದೇಶಗಳಿಗೆ ಹಾಗೂ ಇತರ ನೆರೆ ಹೊರೆಯ ದೇಶಗಳಿಗೆ ರಫ್ತಾಗುತ್ತಿವೆ.

ಆ) ರಾಜ್ಯದ 2002–2003ರಲ್ಲಿ ರೂ. 10,500 ಕೋಟಿ ಮೌಲ್ಯದ ಸರಕುಗಳು ಸಣ್ಣ ಕೈಗಾರಿಕೆಗಳಿಂದ ರಫ್ತಾಗಿರುತ್ತದೆ.

ಇ) ಹೌದು

ಈ) ಸರ್ಕಾರವು ಕರ್ನಾಟಕ ಎಕ್ಸ್‌ಪೋರ್ಟ್ ಪ್ರಮೋಷನ್ ಪಾಲಿಸಿ 2002–07ನ್ನು ಘೋಷಿಸಿದೆ. ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವು ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಕೇಂದ್ರವಾಗಿರುತ್ತದೆ. ರಫ್ತುದಾರರಿಗೆ ಸಂಬಂಧಿಸಿದ ತೊಂದರೆಗಳನ್ನು ವಿವಿಧ ಕೇಂದ್ರ ಮತ್ತು ರಾಜ್ಯಗಳ ರಫ್ತು ಸಂಬಂಧಿತ ಸಮಿತಿಗಳ ಮುಂದಿಟ್ಟು ಆಗಿಂದಾಗ್ಗೆ ಪರಿಹರಿಸುವ ಮೂಲಕ ರಾಜ್ಯದ ರಫ್ತು ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.